ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | | | |
|---|---|---|---|---|
| | ಸಿಸಿ ನಂ. 168/2020 | | | |
| | ಸಿ.ಡಬ್ಲೂಃ | 2 | ಪಿ.ಡಬ್ಲೂಃ | 6 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 24.02.2026 | | | |
| ಸಾಕ್ಷಿದಾರರ ಹೆಸರುಃ | ಬಸವರಾಜ ಗುರನಹಳ್ಳಿ | | | |
| ವಯಸ್ಸುಃ | 40 ವರ್ಷ | | | |
| ಉದ್ಯೋಗಃ | ವ್ಯವಸಾಯ | | | |
| ವಾಸಸ್ಥಳಃ | ಮುಂಡವಾಡ | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

1. ನನಗೆ ಚಾಸಾ 3 ರವರ ಪರಿಚಯ ಇರುತ್ತದೆ. ಈಗ ನನಗೆ ತೋರಿಸಿದ ದಾಖಲೆ ಪಂಚನಾಮೆಯಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ಸದರಿ ಪಂಚನಾಮೆಯನ್ನು ನಿಪಿ 4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ 4 (ಎ) ಎಂದು ಗುರುತಿಸಲಾಯಿತು.** ಅಂದಾಜು 3-4 ತಿಂಗಳ ಹಿಂದೆ ಸದರಿ ಸಹಿಯನ್ನು ನಮ್ಮ ಊರಲ್ಲಿ ಮಾಡಿರುತ್ತೇನೆ. ನಿಪಿ 4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ, ಏನನ್ನು ಜಪ್ತಿ ಮಾಡಿರುವುದಿಲ್ಲ. ಘಟನೆ ಕುರಿತು ಯಾರೂ ನನಗೆ ಏನನ್ನೂ ತೋರಿಸಿಲ್ಲ. ಸಾಕ್ಷಿಯು ಮು.ಮಾ.1 ಮತ್ತು 2 ನ್ನು ಗುರುತಿಸಿರುವುದಿಲ್ಲ. ಸದರಿ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ ಸ ಅ ರವರು ಅನುಮತಿ ಕೇಳಿದ್ದು ಅನುಮತಿಸಲಾಯಿತು)

**ಪಾಟೀ ಸವಾಲುಃ ಎಪಿಪಿ ರವರಿಂದಃ**

1. ದಿಃ 18.03.2020 ರಂದು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಮುಂಜಾನೆ 10.00 ರಿಂದ 11.00 ಗಂಟೆ ಸುಮಾರಿಗೆ ಚಾಸಾ 1 ರವರು ಘಟನಾ ಸ್ಥಳವಾದ ಮುಂಡವಾಡ ಗ್ರಾಮದಿಂದ ಜಾಲವಾಡಗಿ ಗ್ರಾಮದ ಕಡೆಗೆ ಹೋಗುವ ರಸ್ತೆಯನ್ನು ತೋರಿಸಿದ್ದರ ಮೇರೆಗೆ, ಪೋಲಿಸರು ನಿಪಿ 4 ರಂತೆ ಪಂಚನಾಮೆ ಜರುಗಿಸಿ, ಆ ಕಾಲಕ್ಕೆ 1 ಹಿಡಿಗಾತ್ರದ 3 ಅಡಿ ಉದ್ದದ ಬಡಿಗೆ ಮತ್ತು 1 ಹಿಡಿಗಾತ್ರದ ಕೊಡ್ಲಿಯನ್ನು ಆರೋಪಿತರು ಕೃತ್ಯಕ್ಕೆ ಬಳಸಿರುವುದಾಗಿ ಚಾಸಾ 1 ರವರು ತೋರಿಸಿದ್ದರ ಮೇರೆಗೆ, ಪೋಲಿಸರು ಸಾಕ್ಷಿ ಪುರಾವೆ ಕುರಿತು ನಮ್ಮ ಸಮಕ್ಷಮ ಜಪ್ತ ಮಾಡಿ, ಜಪ್ತ ಪಂಚನಾಮೆ ಜರುಗಿಸಿದ್ದರು ಎಂದರೆ ಸರಿ ಅಲ್ಲ.

2. ನನ್ನ ಹಾಗೂ ಚಾಸಾ 3 ರವರ ಮುಂದೆ ಸದರಿ ಪಂಚನಾಮೆ ಮಾಡಿದ್ದರೂ, ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ.
ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಜೆಎಂಎಫ್‌ಸಿ ಮುಂಡರಗಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | | | |
|---|---|---|---|---|
| | ಸಿಸಿ ನಂ. 168/2020 | | | |
| | ಸಿ.ಡಬ್ಲೂ: | 3 | ಪಿ.ಡಬ್ಲೂ: | 7 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 24.02.2026 | | | |
| ಸಾಕ್ಷಿದಾರರ ಹೆಸರುಃ | ದೇವಪ್ಪ ಹನಮಪ್ಪ ಕಾಗನೂರ | | | |
| ವಯಸ್ಸುಃ | 35 ವರ್ಷ | | | |
| ಉದ್ಯೋಗಃ | ವ್ಯವಸಾಯ | | | |
| ವಾಸಸ್ಥಳಃ | ಮುಂಡವಾಡ | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

1. ನನಗೆ ಚಾಸಾ 2 ರವರ ಪರಿಚಯ ಇರುತ್ತದೆ. ಈಗ ನನಗೆ ತೋರಿಸಿದ ನಿಪಿ 4 ಪಂಚನಾಮೆಯಾಗಿದ್ದು ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ಸದರಿ ಸಾಕ್ಷಿಯ ಸಹಿಯನ್ನು **ನಿಪಿ 4 (ಬಿ) ಎಂದು ಗುರುತಿಸಲಾಯಿತು.** ಅಂದಾಜು 3-4 ತಿಂಗಳ ಹಿಂದೆ ಸದರಿ ಸಹಿಯನ್ನು ನಮ್ಮ ಊರಲ್ಲಿ ಮಾಡಿರುತ್ತೇನೆ. ನಿಪಿ 4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ, ಏನನ್ನು ಜಪ್ತಿ ಮಾಡಿರುವುದಿಲ್ಲ. ಘಟನೆ ಕುರಿತು ಯಾರೂ ನನಗೆ ಏನನ್ನೂ ತೋರಿಸಿಲ್ಲ. ಸಾಕ್ಷಿಯು ಮು.ಮಾ.1 ಮತ್ತು 2 ನ್ನು ಗುರುತಿಸಿರುವುದಿಲ್ಲ. ಸದರಿ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ ಸ ಅ ರವರು ಅನುಮತಿ ಕೇಳಿದ್ದು ಅನುಮತಿಸಲಾಯಿತು)

**ಪಾಟೀ ಸವಾಲುಃ ಎಪಿಪಿ ರವರಿಂದಃ**

1. ದಿಃ 18.03.2020 ರಂದು ನನ್ನ ಹಾಗೂ ಚಾಸಾ 2 ರವರ ಸಮಕ್ಷಮ ಮುಂಜಾನೆ 10.00 ರಿಂದ 11.00 ಗಂಟೆ ಸುಮಾರಿಗೆ ಚಾಸಾ 1 ರವರು ಘಟನಾ ಸ್ಥಳವಾದ ಮುಂಡವಾಡ ಗ್ರಾಮದಿಂದ ಜಾಲವಾಡಗಿ ಗ್ರಾಮದ ಕಡೆಗೆ ಹೋಗುವ ರಸ್ತೆಯನ್ನು ತೋರಿಸಿದ್ದರ ಮೇರೆಗೆ, ಪೋಲಿಸರು ನಿಪಿ 4 ರಂತೆ ಪಂಚನಾಮೆ ಜರುಗಿಸಿ, ಆ ಕಾಲಕ್ಕೆ 1 ಹಿಡಿಗಾತ್ರದ 3 ಅಡಿ ಉದ್ದದ ಬಡಿಗೆ ಮತ್ತು 1 ಹಿಡಿಗಾತ್ರದ ಕೊಡ್ಲಿಯನ್ನು ಆರೋಪಿತರು ಕೃತ್ಯಕ್ಕೆ ಬಳಸಿರುವುದಾಗಿ ಚಾಸಾ 1 ರವರು ತೋರಿಸಿದ್ದರ ಮೇರೆಗೆ, ಪೋಲಿಸರು ಸಾಕ್ಷಿ ಪುರಾವೆ ಕುರಿತು ನಮ್ಮ ಸಮಕ್ಷಮ ಜಪ್ತ ಮಾಡಿ, ಜಪ್ತ ಪಂಚನಾಮೆ ಜರುಗಿಸಿದ್ದರು ಎಂದರೆ ಸರಿ ಅಲ್ಲ.

2. ನನ್ನ ಹಾಗೂ ಚಾಸಾ 2 ರವರ ಮುಂದೆ ಸದರಿ ಪಂಚನಾಮೆ ಮಾಡಿದ್ದರೂ, ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಜೆಎಂಎಫ್‌ಸಿ ಮುಂಡರಗಿ.